1429 (2218) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) – ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಲು ಸರ್ಕಾರ ಹಮ್ಮಿಕೊಂಡ ಯೋಜನೆಗಳಾವುವು,

ಆ) ಅದಕ್ಕಾಗಿ ಬಿಡುಗಡೆ ಮಾಡಿದ ಹಣದ ಮೊತ್ತ ಹಾಗೂ ಪ್ರಗತಿಯೇನು,

ಇ) ಹೆಚ್ಚುತ್ತಿರುವ ಭಯೋತ್ಪಾದಕ ಚಟುವಟಿಕೆಗಳು ಹಾಗೂ ಬದಲಾಗುತ್ತಿರುವ ಇತರ ವಿದ್ಯಾಮಾನಗಳ ಪರಿಣಾಮಗಳಿಂದಾಗಿ ಪೊಲೀಸ್ ವ್ಯವಸ್ಥೆಯನ್ನು ಸಬಲೀಕರಣಗೊಳಿಸಿ ಆಧುನಿಕ ರೀತ್ಯಾ ಸುವ್ಯವಸ್ಥೆಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದ ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಲು ಆಧುನೀಕರಣ ಯೋಜನೆಯಡಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ

- ಪೊಲೀಸ್ ಸಿಬ್ಬಂದಿಗಳಿಗೆ ಗೃಹ ನಿರ್ಮಾಣ
- ವಸತಿಯೇತರ ಕಟ್ಟಡಗಳ ನಿರ್ಮಾಣ
- ವಿವಿಧ ರೀತಿಯ ವಾಹನಗಳ ಪೂರೈಕೆ
- ವಿವಿಧ ರೀತಿಯ ಸಂಪರ್ಕ ಸಾಧನಗಳ ಅಳವಡಿಕೆ
- ಅತ್ಯಾಧುನಿಕ ಉಪಕರಣಗಳು – ಪೊಲೀಸ್ ಮತ್ತು ನ್ಯಾಯ ವಿಜ್ಞಾನ ಮತ್ತು ಬೆರಳಚ್ಚು ಶಾಖೆ, ಗುಪ್ತದಳ, ತರಬೇತಿ ಸಂಸ್ಥೆಗಳು ಇತ್ಯಾದಿ
- ಇಲಾಖೆಯ ಕಂಪ್ಯೂಟರೀಕರಣ
- ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಆಧುನಿಕ ಯುಗದ ಸಾಧನ ಸಾಮಗ್ರಿಗಳು ಪೂರೈಕೆ

ಈ ಮೇಲಿನ ಯೋಜನೆಯ ಅನುದಾನ ಶೇಕಡ 75 ರಷ್ಟು ಭಾರತ

ಸರ್ಕಾರದ್ದಾಗಿದ್ದು, ಉಳಿದ ಶೇಕಡ 25 ರಷ್ಟು ಅನುದಾನವನ್ನು ಹೊಂದಾಣಿಕಾ ವಂತಿಗೆಯಾಗಿ ರಾಜ್ಯ ಸರ್ಕಾರ ಭರಿಸಬೇಕಾಗಿರುತ್ತದೆ

ಆ) ಈ ಪೊಲೀಸ್ ಆಧುನೀಕರಣ ಯೋಜನೆಯು 2000–01ರಲ್ಲಿ ಪ್ರಾರಂಭಗೊಂಡಿದ್ದು, 2000–01 ರಿಂದ 2005–06 ರವರೆಗೆ ಬಿಡುಗಡೆ ಮಾಡಲಾದ ಹಣದ ಮೊತ್ತ ಮತ್ತು ಅದರ ಪ್ರಗತಿಯನ್ನು ಈ ಕೆಳಗಿನಂತೆ ಒದಗಿಸಲಾಗಿದೆ

ವರ್ಷ	ಭಾರತ ಸರ್ಕಾರದಿಂದ ಬಿಡುಗಡೆ ಮಾಡಲಾದ ಮೊತ್ತ ರೂ ಕೋಟಿ ಗಳಲ್ಲಿ	ಉಪಯೋಗಿಸಿದ ಮೊತ್ತ ರೂ ಕೋಟಿಗಳಲ್ಲಿ	ಪ್ರಗತಿ	ಷರಾ
2000–01	82 85	82 85	100%	ಬಿಡುಗಡೆ ಮಾಡ
2001–02	76 98	76 98	100%	ಲಾದ ಹಣವನ್ನು
2002–03	75 00	75 00	100%	ಸಂಪೂರ್ಣವಾಗಿ ನಿರ್ದಿಷ್ಟ ಯೋಜನೆ
2003–04	70 00	70 00	100%	ಗಳಿಗೆ ಬಳಸಲಾಗಿದೆ ಭಾರತ ಸರ್ಕಾರವು ದಿ 22 03 07 ಉಳಿಕೆ ಹಣ ರೂ 50 74 ಲಕ್ಷಗಳಿಗೆ ಪುನರ್
2004–05	58 87	58 3626	99 18%	ಮೌಲೀಕರಣ ಆದೇಶ ನೀಡಿದ್ದು, ಇದನ್ನು ನಿರ್ದಿಷ್ಟ ಯೋಜನೆಗೆ ಬಳಸಲು ಕ್ರಮ ಕೈಗೊಳ್ಳಲಾಗಿದೆ
2005–06	47 49	47 49	100%	

ಭಾರತ ಸರ್ಕಾರದ 2006–07ನೇ ಸಾಲಿನ ರೂ 56 00 ಕೋಟಿಗಳ ಅನುದಾನದಲ್ಲಿ, ಸದರಿ ಅನುದಾನವನ್ನು ಪೊಲೀಸ್ ಸಿಬ್ಬಂದಿಗಳ ಗೃಹ ನಿರ್ಮಾಣ, ವಸತಿಯೇತರ ಕಟ್ಟಡಗಳ ನಿರ್ಮಾಣ, ಅತ್ಯಾಧುನಿಕ ವಾಹನಗಳ ಖರೀದಿ, ಸಂಪರ್ಕ ಸಾಧನಗಳ ಖರೀದಿ, ಇಲಾಖೆಯ ಕಂಪ್ಯೂಟರೀಕರಣ, ನೂತನ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಆಧುನಿಕ ಯುಗದ ಸಾಧನೆ ಸಾಮಗ್ರಿಗಳು ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತರಬೇತಿ ಸಂಸ್ಥೆಗಳಿಗೆ/ಕೆ ಎಸ್ ಆರ್ ಪಿ ಮತ್ತು ಇತರೆ ತರಬೇತಿ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯ ಹಾಗೂ ಕೆಲವು ಜಿಲ್ಲೆಗಳ ಪೊಲೀಸ್ ನಿಯಂತ್ರಣ ಕೊರಡಿಗಳು, ಇತ್ಯಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಈಗಾಗಲೇ ಎಲ್ಲಾ ಸಂಬಂಧಿತ ಘಟಕಗಳಿಗೆ ಹಣವನ್ನು ಹಂಚಿಕೆ ಮಾಡಲಾಗಿದೆ ಕೇಂದ್ರ ಸರ್ಕಾರವು ವಿವಿಧ ಶೀರ್ಷಿಕೆಯಡಿ ಬಿಡುಗಡೆ ಮಾಡಲಾಗಿರುವ ಬಹುತೇಕ ಅನುದಾನವನ್ನು ಅನುಮೋದಿತ ಯೋಜನೆಗಳಿಗೆ ಈಗಾಗಲೇ ಉಪಯೋಗಿಸಲಾಗಿದೆ ಇನ್ನುಳಿದ ಬಾಕಿ ಅನುದಾನದಲ್ಲಿ ಉಪಕರಣಗಳ ಖರೀದಿಗಾಗಿ ಟೆಂಡರ್ ಕರೆಯಲಾಗಿದ್ದು, ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಈ ಉಳಿಕೆ ಹಣವನ್ನು ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗೆ ಉಪಯೋಗಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು

ಇ) ಹೆಚ್ಚುತ್ತಿರುವ ಭಯೋತ್ಪಾದಕ ಚಟುವಟಿಕೆಗಳು ಹಾಗೂ ಬದಲಾಗುತ್ತಿರುವ ಇತರ ವಿದ್ಯಮಾನಗಳ ಪರಿಣಾಮಯಿಂದಾಗಿ ಪೊಲೀಸ್ ವ್ಯವಸ್ಥೆಯನ್ನು ಸಬಲೀಕರಣಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಭಯೋತ್ಪಾದನೆ ವಿಷಯಗಳ ಸೂಕ್ಷ್ಮತೆಯ ಬಗ್ಗೆ ಅರಿವು ಮೂಡಿಸಿ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡಲಾಗುತ್ತಿದೆ

2) ರಾಜ್ಯ ಗುಪ್ತವಾರ್ತೆ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳ ತಂಡೋಪತಂಡವಾಗಿ ಭಯೋತ್ಪಾದನೆಯ ಸಂಘಟನೆಗಳ ಹಾಗೂ ಭಯೋತ್ಪಾದಕರ ಬಗ್ಗೆ ಮಾಹಿತಿ ಸಂಗ್ರಹಿಸುವ ಕುರಿತಂತೆ ತರಬೇತಿಯನ್ನು ನೀಡಲಾಗುತ್ತಿದೆ ಕೇಂದ್ರ ಹಾಗೂ ರಾಜ್ಯ ಗುಪ್ತ ವಿಭಾಗಗಳು ಈಗಾಗಲೇ ದಿನಾಂಕ 05–06–2005 ರಿಂದ ದಿನಾಂಕ

10–06–2006 ರವರೆಗೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಐ ಎಸ್ ಐ ಎಸ್ ಟಿ ತರಬೇತಿಯನ್ನು ಗುಪ್ತಚರ ಇಲಾಖೆಯ ಹಾಗೂ ಇತರ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ

3) ಈಗಾಗಲೇ ಗುಪ್ತಚರ ವಿಭಾಗವನ್ನು ಚುರುಕುಗೊಳಿಸಲು ಹಾಗೂ ಅದರ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಸರ್ಕಾರವು ಹೆಚ್ಚುವರಿಯಾಗಿ ಗುಪ್ತಚರ ಇಲಾಖೆಗೆ 1 ಎಸ್ ಪಿ, 2 ಡಿ ಎಸ್ ಪಿ, 3 ಪಿ ಐ, 5 ಪಿ ಎಸ್ ಐ, 243 ಪಿ ಸಿ, 6 ಮಹಿಳಾ ಪಿ ಸಿ, 27 ಎ ಪಿ ಸಿ ಚಾಲಕ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ

4) ಸಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್ (ಎಸ್ ಎಂ ಎ ಸಿ) ಅನ್ನು ರಾಜ್ಯದಲ್ಲಿ ಎಸ್ ಐ ಬಿ ಸಂಘಟನೆಯೊಂದಿಗೆ ಸ್ಥಾಪಿಸಲಾಗಿದೆ ದಿನಾಂಕ 23–08–2006 ರಿಂದ ಮತ್ತು ದಿನಾಂಕ 13–12–2006 ರಂದು ಸಮನ್ವಯ ಸಭೆಯನ್ನು ನಡೆಸಿ, ಭಯೋತ್ಪಾದನೆಯ ಕುರಿತಂತೆ ಚರ್ಚೆ ನಡೆಸಲಾಗಿದೆ

5) ಕರಾವಳಿ ತೀರದ ಮೂಲಕ ನುಸುಳಬಹುದಾದ ಉಗ್ರರ ಬಗ್ಗೆ ಹಾಗೂ ಇನ್ನಿತರ ಚಟುವಟಿಕೆ ಕುರಿತಂತೆ ತೀವ್ರ ನಿಗಾ ಕೈಗೊಳ್ಳಲಾಗಿದೆ

6) ಗುಪ್ತಚರ ಇಲಾಖೆಯು ಆಧುನಿಕ ತಾಂತ್ರಿಕ ಉಪಕರಣಗಳನ್ನು ಹೊಂದಿದ್ದು, ಇವುಗಳ ಬಳಕೆಯಿಂದ ಉಗ್ರಗಾಮಿಗಳ ಚಲನವಲನಗಳ ಮೇಲೆ ನಿಗಾವಹಿಸಿ ಕ್ರಮವನ್ನು ಕೈಗೊಳ್ಳಲಾಗಿದೆ

1430 (1498) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ (ಸೂಪರ್‌ನ್ಯೂಮರರಿ ಹುದ್ದೆ) ನೌಕರರನ್ನು ಖಾಯಂ ಗೊಳಿಸುವುದು ನಿಜವೇ,

ಆ) ವಿವಿಧ ಇಲಾಖೆಗಳ ದ್ವಿತೀಯ ದರ್ಜೆ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಿರುವುದು ಸರಿಯೇ, ಯಾವ ರೀತಿಯಲ್ಲಿ ಬಡ್ತಿ ನೀಡಲಾಗಿದೆ,